'ಪ್ರಜಾವಾಣಿ ದೀಪಾವಳಿ ಕಥಾ ಸ್ಪರ್ಧೆ'ಗೆ ಕಳುಹಿಸಿ ನನ್ನನ್ನು ತೋರಿದ್ದು.

ನಾನು ದುಃಖವನ್ನೂ ತಬ್ಬಲಿತನವನ್ನೂ ಕಳೆದುಕೊಳ್ಳಲು ಕಥೆ ಬರೆದದ್ದು. ದುಃಖವನ್ನು ಕಥೆಯಲ್ಲಿ ಮಾತ್ರವೇ ತಕ್ಕುದಾಗಿ ಕಳೆದುಕೊಳ್ಳಲು ಸಾಧ್ಯ ಎಂದು ಸುಮ್ಮನೆ ನನಗನಿಸಿತ್ತು. ಆ ಮೊದಲು ಎಷ್ಟೋ ಕವಿತೆ ಬರೆದಿದ್ದರೂ ಅಲ್ಲಿ ಎಲ್ಲೂ ನನ್ನ ವೈಯಕ್ತಿಕ ಜಗತ್ತು ವ್ಯಕ್ತವಾಗಲು ಅವಕಾಶವಾಗಿರಲಿಲ್ಲ. ಅಷ್ಟರ ಮಟ್ಟಿಗೆ ಹೇಳುವುದಾದರೆ ನನ್ನಂತವರು ಬರೆವ ಈ ಬಗೆಯ ಆಧುನಿಕ ಕಥೆಗಳೇ ನಮ್ಮ ನಮ್ಮ ಬಿಡುಗಡೆಗಳು ಹಾಗೆಯೇ ನಾಳೆಯವರ ಕಥೆಗಳ ಕೊಂಡಿಗಳು. ನಮ್ಮ ಅದೆಷ್ಟೋ ಅಜ್ಜಿಯರು ತಮ್ಮ ಮೇಲಾದ ಎಲ್ಲ ಅನ್ಯಾಯಗಳನ್ನು ಫ್ಯಾಂಟಸಿಯ ರಮ್ಯ ರೋದನ ಸೌಂದರ್ಯ ನಿರೂಪಣೆಯ ಮೂಲಕ ನಿರೂಪಿಸುತ್ತಿದ್ದರು. ತಾಯಂದಿರು ತಮ್ಮ ಹಸಿ ಹಸಿಯ ಗಾಯಗಳ ಯಾಂತ್ರಿಕ ನಿರೂಪಣೆಗಳಿಂದ ದಿವ್ಯವಾಗಿ ನಿರೂಪಿಸುತ್ತಿದ್ದರು. ಅವರಂತೆಯೇ ಕೂಡ, ನಾನು ನನ್ನ ಕಾಲದ ಆಧುನಿಕ ವಸಾಹತೋತ್ತರ ಕಥನ ನಿರೂಪಣೆಯನ್ನು ಕಂಡುಕೊಂಡೆ ಈಗ, ಜಾಗತೀಕರಣೋತ್ತರ ಕಾಲ... ಕಾಲ ಲೇಖಕರನ್ನು ಎಲ್ಲೆಲ್ಲಿಯೋ ಕೊಂಡೊಯ್ದಿದೆ. ವರ್ತಮಾನದ ಕನ್ನಡ ಕಥನ ತಾಳ್ಮೆ ಕಳೆದುಕೊಂಡಿದೆ. ತನ್ನ ಪ್ರಜ್ಞೆಯ ಹಳ್ಳಿಗಳೀಗ ಸಮಾಧಿಗಳಂತೆ ಕಾಡುತ್ತಿವೆ. ಅಳಿವಿನಂಚಿನ ಕಥೆಗಳ ಕಥೆಗಾರ ನಾನು. ಇಲ್ಲವೇ ಗತ ಸ್ಮರಣೆಯ ಮರುಕ ಭಾವಗಳ ತಬ್ಬಲಿಯಾಗಿರಬಹುದು. ಈ ಕಾಲಕ್ಕೆ ಬೇಕಾದ ಕಥೆಗಳ ಬರೆಯಲು ಬರುವುದಿಲ್ಲ ಎಂದಲ್ಲ. ಕಥೆಗಳ ಮಗ್ಗಲು ಬದಲಿಸಿಕೊಳ್ಳಲು ಅಲಾರಾಂ ಕೊಟ್ಟುಕೊಂಡಂತಿರುವ ಈ ಬಲವಂತದ ಎಚ್ಚರದ ಬಗ್ಗೆ ತೂಕಡಿಸುತ್ತಿರುವೆ... ಕಥೆಗಳ ನನ್ನಾತ್ಮ ಮೌನದಲಿ ನಗಾಡುತ್ತಿದೆ...

ಬರೆದ ಬಳಿಕ ಓದುಗರಿಂದ, ಸ್ವತಃ ನಿಮ್ಮ ಕಥೆಯಿಂದ ಏನನ್ನು ನಿರೀಕ್ಷಿಸುವಿರಿ? ಎಂಬ ಪ್ರಶ್ನೆಗೆ ಭಾಗಶಃ ಏನೂ ಇಲ್ಲ, ಬಿಡಿಸಿಕೊಂಡೆ ಎಂಬುದೇ ಸಂಪಾದನೆ; ಅದೇ ಶೂನ್ಯ ಸಂಪಾದನೆ. ಅತ್ತು ಅತ್ತು, ಬಿಕ್ಕಿ ಬಿಕ್ಕಿ ನಿರಾಳವಾದಾಗ ಸಿಕ್ಕಿದ ಆ ಅವ್ಯಕ್ತ ಸ್ಥಿತಿಯೇ ಸಂಪಾದನೆ, ಕಥೆ ಬರೆದು ಮುಗಿಸಿದ ಕೂಡಲೆ ಅದು ನನಗೆ ದಕ್ಕಿರುತ್ತದೆ. ಅದಕ್ಕಿಂತಲೂ ದೊಡ್ಡದನ್ನು ಮತ್ತೆ ಯಾವ ರೂಪದಲ್ಲೂ ಯಾರೂ ನನಗೆ ಕೊಡಲು ಸಾಧ್ಯವಿಲ್ಲ. ಇದನ್ನು ಬಿಡಿಸಿ ಹೇಳಲಾರೆ.

ಬಹಳ ಸಲ ಅನ್ನಿಸಿದೆ. ಭಾಗಶಃ ಈವರೆಗಿನ ನನ್ನ ನೂರಾರು ಕಥೆಗಳನ್ನು ನಾನು ತಿದ್ದಿ ಬರೆದು ಪುರಸ್ಕರಿಸಿರುವುದು ಇಲ್ಲವೇ ಇಲ್ಲವೇನೊ ಎಂಬಷ್ಟು ವಿರಳ. ತಿದ್ದಿ ಬರೆದ ಕಥೆಗಳು ಜಾಳಾಗಿವೆ ಅಥವಾ ಬೇರೆ ಆಗಿವೆ. ಕುರಿತೋದದೆಯುಂ ಕಾವ್ಯ ಪರಿಣತರು ಎಂಬ ಕವಿರಾಜ ಮಾರ್ಗಕಾರನ ದಾರಿಯವನು ನಾನು. ಅತ್ತದ್ದನ್ನು ನಲಿದದ್ದನ್ನು, ದಿಕ್ಕರಿಸಿದ್ದನ್ನು ರಿಹರ್ಸಲ್ ಮೂಲಕವೊ ತಿದ್ದುಪಡಿಯ ಮೂಲಕವೊ ಮಾಡಲು ಸಾಧ್ಯವಿಲ್ಲ. ಹಾಗಾಗಿಯೇ ಬರೆದದ್ದನ್ನು ಮತ್ತೊಮ್ಮೆ ಕಲಾತ್ಮಕವಾಗಿ ರಂಜನೀಯವಾಗಿ ಮಾರ್ಪಡಿಸಲು ಹೋಗುವುದಿಲ್ಲ. ಅದೆಲ್ಲ ಆನಂದ ಮತ್ತು ದುಃಖ ಉಂಟಾಗುವುದಾದರೆ ಅವೆರಡೂ ಒಟ್ಟಿಗೇ ಒಂದು ಕಥೆಯ ಒಳಗೆ ಆಗಬೇಕೆಂದು ಬರೆಯುವವನು ನಾನು. ಈ ಕಥೆ ಸರಿ ಇಲ್ಲ ಎಂದು ತಿದ್ದಿದಾಗಲೆಲ್ಲ ಆ ಕಥೆ ಬೇರೆಯೇ ಆಗಿದೆ. ನನ್ನ ಕಥೆಗಳಲ್ಲಿ ಅಂತಹ ಹಲವು ಮಾದರಿಗಳು ಸಾಕಷ್ಟಿವೆ.

ಈ ಕಥೆಯನ್ನು ಹೀಗೆ ಬರೆಯಬಹುದು ಎಂದು ಅನಿಸಿದ್ದು ಬೇರೆಯವರ ಕಥೆ ಓದಿದಾಗ. ನಿರಂಜನರು ವಿಶ್ವ ಕಥಾ ಕೋಶದ ಸಂಪುಟಗಳ ರೂಪಿಸಿದ್ದರು. ಅನಂತರ ಎಸ್. ದಿವಾಕರ್ ಅವರು ನೊಬೆಲ್ ಸಾಹಿತ್ಯ ಪ್ರಶಸ್ತಿ ಪಡೆದ ಕಥೆಗಾರರ ಶ್ರೇಷ್ಠ ಕಥೆಗಳ ಅನುವಾದ ಮಾಡಿದ್ದರು. ಆ ಕಥೆಗಳ ಓದುವ ಮೊದಲು ನಾನು ಕಥೆಗಾರನೇ ಅಲ್ಲ. ಆದರೆ ಅಂತವರ ಕಥೆಗಳಲ್ಲೂ ನಾನೇ ನುಡಿಯಬಹುದಾದ ಕಥೆಯ ವಿಳಾಸ ತಪ್ಪಿದೆ ಎನಿಸುತ್ತಿತ್ತು. ಟ್ಯಾಗೋರರ ಕಾಬೂಲಿವಾಲಾನ